# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು – 572 103.

ದಿನಾಂಕ: 30.08.2023 ರಂದು ಬೆಳಿಗ್ಗೆ: 10.30 ಗಂಟೆಗೆ ಮಾನ್ಯ ಕುಲಪತಿಯವರ ಕೊಠಡಿ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು–572103 ಇಲ್ಲಿ ನಡೆದ 2023–24ನೇ ಸಾಲಿನ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳು

## ಹಾಜರಾದ ಸದಸ್ಯರುಗಳು

| | | |
|---|---|---|
| 1. | ಪ್ರೊ. ವೆಂಕಟೇಶ್ವರಲು ಎಂ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಶಿವಲಿಂಗಸ್ವಾಮಿ ಹೆಚ್.ಕೆ.,<br>ಹಿರಿಯ ಡೀನರು, ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 3. | ಡಾ. ಕೆ ರಾಜೀವಲೋಚನ<br>ನಿವೃತ್ತ ತತ್ವಶಾಸ್ತ್ರ ಉಪನ್ಯಾಸಕರು, ಕೌಸ್ತುಭ 179, ದಾರುಕ ಬಡಾವಣೆ, ಜೋಗಿಮಟ್ಟಿ ರಸ್ತೆ, ಚಿತ್ರದುರ್ಗ–577501. | ಸದಸ್ಯರು |
| 4. | ಶ್ರೀ ಕೆ.ಆರ್ ದೇವರಾಜ್<br>S/o ರಾಮಾಂಜಿನಪ್ಪ, ಮನೆ ಸಂಖ್ಯೆ: 202, ಹಳೆ ಅಂಚೆ ಕಚೇರಿ ರಸ್ತೆ, ಸೂಲಿಬೆಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 129 | ಸದಸ್ಯರು |
| 5. | ಡಾ. ರಂಗಪ್ಪ ಎಸ್.ಟಿ.<br>ಪ್ರಾಂಶುಪಾಲರು, ಸರ್ಕಾರಿ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಶಿರಾ ತುಮಕೂರು ಜಿಲ್ಲೆ–572137. | ಸದಸ್ಯರು |
| 6. | ಡಾ. ಹೆಚ್.ಪಿ. ವೀರಭದ್ರಸ್ವಾಮಿ,<br>ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು–572101. | ಸದಸ್ಯರು |
| 7. | ಡಾ. ಪ್ರಸನ್ನ,<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಸದಸ್ಯರು |
| 8. | ಶ್ರೀಮತಿ ವಸಂತ ಟಿ.ಡಿ.<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಿ.ಹೆಚ್. ರಸ್ತೆ, ತುಮಕೂರು ಜಿಲ್ಲೆ–572101. | ಸದಸ್ಯರು |
| 9. | ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 10. | ಕುಲಸಚಿವರು | ಸದಸ್ಯ ಕಾರ್ಯದರ್ಶಿ |

## ಹಾಜರಾಗದ ಸದಸ್ಯರು

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರು ಅಥವಾ<br>ಇವರ ಪ್ರತಿನಿಧಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| 5. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರು ದಿನಾಂಕ:30.08.2023ರ ಬುಧವಾರ ಬೆಳಿಗ್ಗೆ: 10.30 ಗಂಟೆಗೆ ಮಾನ್ಯ ಕುಲಪತಿಯವರ ಕೊಠಡಿ, ತುಮಕೂರು ವಿಶ್ವವಿದ್ಯಾನಿಲಯದ ಆವರಣ, ಬಿ.ಹೆಚ್.ರಸ್ತೆ, ತುಮಕೂರು-572103 ಇಲ್ಲಿ ನಡೆದ 2023-24ನೇ ಸಾಲಿನ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು, ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಯ ಬಗ್ಗೆ ಚರ್ಚಿಸಿ ನಿರ್ಣಯವನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| **ದಿನಾಂಕ:17.05.2023 ರಂದು ನಡೆದ ಮೂರನೇ ಸಾಮಾನ್ಯ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ ಮತ್ತು ದಿನಾಂಕ:19.06.2023, ದಿನಾಂಕ:28.06.2023, ದಿನಾಂಕ 17.07.2023, ದಿನಾಂಕ 21.07.2023 ಮತ್ತು ದಿನಾಂಕ 05.08.2023 ರಂದು ಕ್ರಮವಾಗಿ ನಡೆದ ಎರಡನೇ, ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ವಿಶೇಷ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ** | | | |
| **ಪರೀಕ್ಷಾ ವಿಭಾಗ** | | | |
| 1. | 2023-24.ಸಾ.ಸಿಂ-01 ಪ.ವಿ.-01 | ಮುಖ್ಯ ಉತ್ತರ ಪುಸ್ತಕಗಳ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, 2021-22 ಮತ್ತು 2022-23ನೇ ಸಾಲಿನ ವಿವಿಧ ಸ್ನಾತಕ ಪದವಿ ಎನ್.ಇ.ಪಿ ಪರೀಕ್ಷೆಗಳಿಗೆ ಉತ್ತರ ಪುಸ್ತಕಗಳನ್ನು ಸರಬರಾಜು ಮಾಡಿರುವ ಹುಂಡಿಯ ಮೊತ್ತ ರೂ.11,30,500.00 (ರೂಪಾಯಿ ಹನ್ನೊಂದು ಲಕ್ಷದ ಮೂವತ್ತು ಸಾವಿರದ ಐದುನೂರು ಮಾತ್ರ)ಗಳನ್ನು ಮೆ. ಜೆಮಿನಿ ಗ್ರಾಫಿಕ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು (ಬೀದರ್) ಇವರಿಗೆ ನಿಯಮಾನುಸಾರ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 2. | 2023-24.ಸಾ.ಸಿಂ-01 ಪ.ವಿ.-02 | ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣದ ವೆಚ್ಚವನ್ನು ಪಾವತಿಸುವ ಕುರಿತು. | 2023ರ ಮೇ/ ಜೂನ್ ಮಾಹೆಗಳಲ್ಲಿ ನಡೆದ ಎಂ.ಬಿ.ಎ ಮತ್ತು ಎಂ.ಸಿ.ಎ ಹಾಗೂ ಸ್ನಾತಕ ಶಿಕ್ಷಣ ಪದವಿ ಪ್ರಶ್ನೆ ಪತ್ರಿಕೆಗಳ ರಹಸ್ಯ ಮುದ್ರಣ ಸಂಬಂಧ ದರ ಕರಾರು ಒಪ್ಪಂದ ಮಾಡಿಕೊಂಡಿರುವ ನಂಬಿಗಸ್ಥ ಸಂಸ್ಥೆಗೆ ರೂ.1,46,103.00 (ಒಂದು ಲಕ್ಷದ ನಲವತ್ತಾರು ಸಾವಿರದ ಒಂದು ನೂರ ಮೂರು ರೂಪಾಯಿ ಮಾತ್ರ)ಗಳನ್ನು ಈಗಾಗಲೇ ಪಾವತಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 3. | 2023-24.ಸಾ.ಸಿಂ-01 ಪ.ವಿ.-03 | ಕೋವಿಡ್-19ರ ಕಾರಣದಿಂದಾಗಿ ಪರೀಕ್ಷೆ ಇಲ್ಲದೆ ಉನ್ನತೀಕರಣಗೊಳಿಸುವ ಸೌಲಭ್ಯದ ಕುರಿತು. | 2018-19 ಮತ್ತು 2019-20 ನೇ ಸಾಲಿನಲ್ಲಿ ಪ್ರವೇಶ ಪಡೆದು ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನಲ್ಲಿ |

| | | | |
|---|---|---|---|
| | | | ಉತ್ತೀರ್ಣರಾದಲ್ಲಿ ಮಾತ್ರ ಆ ಸೆಮಿಸ್ಟರ್‌ಗಳ ಫಲಿತಾಂಶಕ್ಕನುಗುಣವಾಗಿ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಫಲಿತಾಂಶವನ್ನು ಪ್ರಕಟಿಸಲು ಈ ಹಿಂದೆ ಅವಕಾಶ ಕಲ್ಪಿಸಲಾಗಿತ್ತು. ಸದರಿ ವಿದ್ಯಾರ್ಥಿಗಳಿಗೆ ಈಗಾಗಲೇ ಎರಡು ಬಾರಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಆದರೂ 2018-19 ಮತ್ತು 2019-20ನೇ ಸಾಲಿನ ಅನೇಕ ವಿದ್ಯಾರ್ಥಿಗಳು ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ವಿವಿಧ ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದು, ಮತ್ತೊಮ್ಮೆ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳನ್ನು ತೆಗೆದುಕೊಂಡು, ಅವುಗಳ ಫಲಿತಾಂಶಕ್ಕನುಗುಣವಾಗಿ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಫಲಿತಾಂಶವನ್ನು ಪಡೆಯಲು ಮನವಿಗಳನ್ನು ಸಲ್ಲಿಸಿರುವುದು ಸಭೆಯ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಕೆಳಕಂಡ ಷರತ್ತುಗಳಿಗೊಳಪಟ್ಟು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಒಂದು ಬಾರಿ ಮಾತ್ರ 2018-19, 2019-20 ಮತ್ತು 2020-21ನೇ ಸಾಲಿನ ವಿದ್ಯಾರ್ಥಿಗಳಿಗೆ 2023-24ನೇ ಸಾಲಿನಲ್ಲಿ ನಡೆಯುವ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ (ಸೈದ್ಧಾಂತಿಕ ಮತ್ತು ಪ್ರಾಯೋಗಿಕ) ಪರೀಕ್ಷೆಗಳೊಂದಿಗೆ ಪರೀಕ್ಷೆಯನ್ನು ಬರೆಯಲು ಹಾಗೂ ಅದರಂತೆ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಫಲಿತಾಂಶವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>2018-19, 2019-20 ಮತ್ತು 2020-21 ನೇ ಸಾಲಿನಲ್ಲಿ ಪ್ರವೇಶ ಪಡೆದು ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ವಿವಿಧ ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ 2023-24ನೇ ಸಾಲಿನಲ್ಲಿ ನಡೆಯುವ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳೊಂದಿಗೆ (ಸೈದ್ಧಾಂತಿಕ ಮತ್ತು ಪ್ರಾಯೋಗಿಕ) ಪರೀಕ್ಷೆಯನ್ನು ಬರೆಯಲು ಇದೊಂದು ಅಂತಿಮ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು |

| | | | |
|---|---|---|---|
| | | | ಉತ್ತೀರ್ಣರಾದಲ್ಲಿ ಮಾತ್ರ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ಫಲಿತಾಂಶದ ಆಧಾರದ ಮೇಲೆ ಎರಡು ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಫಲಿತಾಂಶವನ್ನು ಸರ್ಕಾರದ ಮಾರ್ಗಸೂಚಿ ಹಾಗೂ ವಿಶ್ವವಿದ್ಯಾನಿಲಯದ ನಿಯಮಗಳಿಗನುಗುಣವಾಗಿ ಪ್ರಕಟಿಸಲಾಗುವುದು. ಸದರಿ ವಿದ್ಯಾರ್ಥಿಗಳು ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ಗಳ ಯಾವುದೇ ವಿಷಯದಲ್ಲಿ ಅನುತ್ತೀರ್ಣರಾದಲ್ಲಿ, ಅವರುಗಳನ್ನು ಪೂರಕ ವಿದ್ಯಾರ್ಥಿಗಳೆಂದು ಪರಿಗಣಿಸಿ, ಅವರುಗಳು ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನ ಎಲ್ಲಾ ವಿಷಯಗಳ (ಸೈದ್ಧಾಂತಿಕ ಮತ್ತು ಪ್ರಾಯೋಗಿಕ) ಪರೀಕ್ಷೆಗೆ ತೆಗೆದುಕೊಂಡೇ ಉತ್ತೀರ್ಣರಾಗಬೇಕಾಗುತ್ತದೆ.<br>2018-19, 2019-20 ಮತ್ತು 2020-21ನೇ ಸಾಲಿನ ವಿದ್ಯಾರ್ಥಿಗಳು 2022-23ನೇ ಸಾಲಿನಲ್ಲಿ ಈಗಾಗಲೇ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಪರೀಕ್ಷಾ ಶುಲ್ಕವನ್ನು ಪಾವತಿಸಿ, ಪರೀಕ್ಷೆ ಬರೆದಿರುವ /ಬರೆಯುತ್ತಿರುವ ಎಲ್ಲಾ ಪರೀಕ್ಷಾ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವುದು ಹಾಗೂ ಸದರಿ ವಿದ್ಯಾರ್ಥಿಗಳು ಈಗಾಗಲೇ ಪಾವತಿಸಿರುವ ಪರೀಕ್ಷಾ ಶುಲ್ಕಗಳ ಮರುಪಾವತಿಗೆ ಯಾವುದೇ ಅವಕಾಶವಿರುವುದಿಲ್ಲ.<br>2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಪ್ರವೇಶ ಪಡೆದ ಸದರಿ ವಿದ್ಯಾರ್ಥಿಗಳಿಗೆ 2023-24ನೇ ಸಾಲಿನಲ್ಲಿ ಕಲ್ಪಿಸಲಾಗಿರುವ ಅವಕಾಶವನ್ನು ಹೊರತುಪಡಿಸಿ, ಅವರುಗಳು ಯಾವುದೇ ಕಾರಣಕ್ಕೂ ಪ್ರಥಮ ಮತ್ತು ತೃತೀಯ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಕ್ಕನುಗುಣವಾಗಿ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ಗಳ ಫಲಿತಾಂಶವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಅವರುಗಳನ್ನು ಮುಂಬರುವ ಎಲ್ಲಾ ಪರೀಕ್ಷೆಗಳಿಗೂ ಪೂರಕ ವಿದ್ಯಾರ್ಥಿಗಳೆಂದೇ ಪರಿಗಣಿಸಲಾಗುವುದು. |

| | | | |
|---|---|---|---|
| ಇಂಜಿನಿಯರಿಂಗ್ ವಿಭಾಗ | | | |
| 4. | 2023–24.ಸಾ.ಸಿಂ–01 ಇಂ.ವಿ.01 | ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ಗೆ Overhead Gantry Welcome Board ಮತ್ತು ವಿಶ್ವವಿದ್ಯಾನಿಲಯದ ನಾಮಾಂಕಿತ ಫಲಕ (Sign Board) ಗಳನ್ನು ಅಳವಡಿಸುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಪ್ರಸ್ತುತ ಅನುಮೋದನೆಗೊಂಡಿರುವ ಮುಖ್ಯದ್ವಾರ ಮತ್ತು ಕಾಂಪೌಡ್ ಗೋಡೆ ಕಾಮಗಾರಿಯ ಜೊತೆಗೆ Overhead Gantry Welcome Board ಮತ್ತು Sign Board ಗಳ ಕಾಮಗಾರಿಯನ್ನು ರೂ.250.00 ಲಕ್ಷಗಳ ಮಿತಿಯಲ್ಲಿಯೇ ನಿರ್ಮಿಸಬಹುದಾಗಿರುವುದರಿಂದ ಪರಿಷ್ಕೃತ ಅಂದಾಜು ಪಟ್ಟಿಗೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 5. | 2023–24.ಸಾ.ಸಿಂ–01 ಇಂ.ವಿ.02 | ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನ ಮೊದಲ ಹಂತದ ಕಾಮಗಾರಿಯ ಕರಾರು ನವೀಕರಣ ಕುರಿತು. | ಮೆ.ರೈಟ್ಸ್ ಲಿಮಿಟೆಡ್ ಇವರು ದಿನಾಂಕ 30.06.2023ರ ಮನವಿಯಲ್ಲಿ ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್‌ನ ಮೊದಲ ಹಂತದ ಕಾಮಗಾರಿಯು ಪ್ರಗತಿಯಲ್ಲಿದ್ದು ದಿನಾಂಕ:21.07.2023ಕ್ಕೆ ಒಂದು ವರ್ಷದ ಕರಾರಿನ ಅವಧಿಯು ಮುಕ್ತಾಯವಾಗಿದ್ದು, ಮುಂದಿನ ಮೂರು ವರ್ಷಗಳ ಅವಧಿಗೆ ಕರಾರು ನವೀಕರಣ ಮಾಡುವಂತೆ ಸಲ್ಲಿಸಿರುವ ಮನವಿಯ ಕುರಿತು ಕೂಲಂಕುಷವಾಗಿ ಚರ್ಚಿಸಿದ ಸಭೆಯು ಕಾಮಗಾರಿಗಳು ಚಾಲ್ತಿಯಲ್ಲಿರುವುದರಿಂದ, ದಿನಾಂಕ:22.07.2023 ರಿಂದ ಪೂರ್ವಾನ್ವಯವಾಗುವಂತೆ, ಆರು ತಿಂಗಳ ಅವಧಿಗೆ ಷರತ್ತಿಗಳಿಗೊಳಪಟ್ಟು ಕರಾರನ್ನು ನವೀಕರಣ ಮಾಡಲು ಸಭೆಯು ನಿರ್ಣಯಿಸಿತು. |
| ಅಭಿವೃದ್ಧಿ ವಿಭಾಗ | | | |
| 6. | 2023–24.ಸಾ.ಸಿಂ–01 ಅ.ವಿ.01 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮತ್ತು ಸ್ನಾತಕ ಪದವಿ (ಪಾವತಿ) ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ LPG Pipe Line ಅಳವಡಿಸಲು ನೊಂದಣಿ ಶುಲ್ಕ, ಠೇವಣಿ ಶುಲ್ಕ ಹಾಗೂ ಬಳಕೆದಾರರ ಶುಲ್ಕಗಳ ಮೊತ್ತ ಮಂಜೂರಾತಿಗೆ ಕ್ರಮವಹಿಸಿರುವ ಸಂಬಂಧ ಸ್ಥಿರೀಕರಣ ಕುರಿತು. | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮತ್ತು ಸ್ನಾತಕ ಪದವಿ (ಪಾವತಿ) ಪುರುಷ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಿಗೆ LPG Pipe Line ಅಳವಡಿಸಲು ನೊಂದಣಿ ಶುಲ್ಕ, ಠೇವಣಿ ಶುಲ್ಕ ಹಾಗೂ ಬಳಕೆದಾರರ ಶುಲ್ಕಗಳ ಮೊತ್ತ ರೂ. 2,49,000.00 (ರೂಪಾಯಿ ಎರಡು |

| | | | |
|---|---|---|---|
| | | | ಲಕ್ಷದ ನಲವತ್ತೊಂಬತ್ತು ಸಾವಿರ ಮಾತ್ರ)ಗಳನ್ನು ಮೆ. ಮೇಘಸಿಟಿ ಗ್ಯಾಸ್ ಡಿಸ್ಟ್ರಿಬ್ಯೂಷನ್ ಪ್ರೈವೆಟ್ ಲಿಮಿಟೆಡ್, ತುಮಕೂರು ಇವರಿಗೆ ಷರತ್ತು ಮತ್ತು ನಿಬಂಧನೆಗೊಳಪಟ್ಟು ಪಾವತಿಸುವ ಸಂಬಂಧ ದಿನಾಂಕ:03.08.2023ರಂದು ವಿಶ್ವವಿದ್ಯಾನಿಲಯವು ಹೊರಡಿಸಿರುವ ಆದೇಶದ ಕ್ರಮವನ್ನು ಸಿಂಡಿಕೇಟ್ ಅನುಮೋದಿಸಿ ಸ್ಥಿರೀಕರಿಸಿತು. |
| 7. | 2023–24.ಸಾ.ಸಿಂ–01 ಅ.ವಿ.02 | The Institute of Chartered Accountants of India (ICAI), New Delhi ಯೊಂದಿಗೆ ತುಮಕೂರು ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡಕೊಳ್ಳುವ ಕುರಿತು. | The Institute of Chartered Accountants of India (ICAI), New Delhi ಯೊಂದಿಗೆ ತುಮಕೂರು ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಚರ್ಚಿಸಿದ ಸಭೆಯು ಕಾನೂನಾತ್ಮಕ ತೊಡಕು ಇಲ್ಲದಿರುವುದರಿಂದ ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ನಿರ್ಣಯಿಸಿತು. |
| 8. | 2023–24.ಸಾ.ಸಿಂ–01 ಅ.ವಿ.03 | 2022–23ನೇ ಸಾಲಿನ ವಾರ್ಷಿಕ ವರದಿ ಕುರಿತು. | 2022–23ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿದ ಸಭೆಯು ವಾರ್ಷಿಕ ವರದಿಯನ್ನು ಅನುಮೋದಿಸಿ, ನಿಯಮಾನುಸಾರ ಮುದ್ರಣ ಮಾಡಲು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಸಭೆಯು ತೀರ್ಮಾನಿಸಿತು. |
| **ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ (ಸಿಬ್ಬಂದಿ ವಿಭಾಗ)** | | | |
| 9. | 2023–24.ಸಾ.ಸಿಂ–01 ಸಿ.ವಿ–01 | ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಸಂಚಿತ ವೇತನ ನೌಕರರಿಗೆ ಮಧ್ಯಂತರ ಪರಿಹಾರ ವಿಸ್ತರಿಸುವಂತೆ ಮನವಿ ಸಲ್ಲಿಸಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಸರ್ಕಾರದ ಆದೇಶ ಹಾಗೂ ಹಣಕಾಸು ಅಧಿಕಾರಿಗಳ ಅಭಿಪ್ರಾಯವನ್ನು ಪರಿಶೀಲಿಸಿದ ಸಭೆಯು, ಸರ್ಕಾರದ ಆದೇಶ ಸಂಖ್ಯೆ ಆಇ 130 ಸೇ–2/2023 ದಿನಾಂಕ: 15.06.2023ರನ್ವಯ ಶೇ.17% ಮಧ್ಯಂತರ ಪರಿಹಾರವನ್ನು ನೀಡಲು ಅವಕಾಶ ಇರುವುದಿಲ್ಲ ಎಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 10. | 2023–24.ಸಾ.ಸಿಂ–01 ಸಿ.ವಿ–02 | ಶ್ರೀ ತಿಪ್ಪೇಶ್ ಹೆಚ್., ದ್ವಿತೀಯ ದರ್ಜೆ ಸಹಾಯಕರು (ಹಂಗಾಮಿ ಸಂಚಿತ ವೇತನ ನೌಕರರು) ಇವರ ಸೇವೆಯನ್ನು ಮುಂದುವರೆಸುವ ಕುರಿತು. | ಶ್ರೀ ತಿಪ್ಪೇಶ್.ಹೆಚ್ ದ್ವಿತೀಯ ದರ್ಜೆ ಸಹಾಯಕರು (ಹಂಗಾಮಿ ಸಂಚಿತ ವೇತನ ನೌಕರರು) ಇವರ ಸೇವೆಯನ್ನು ಮುಂದುವರೆಸುವ ಕುರಿತು ಚರ್ಚಿಸಿದ |

| | | | |
|---|---|---|---|
| | | | ಸಭೆಯು, ಸ್ನಾತಕೋತ್ತರ ಗಣಿತಶಾಸ್ತ್ರ ವಿಭಾಗದ ಅಧ್ಯಕ್ಷರು ಹಾಗೂ ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗದ ಸಂಯೋಜಕರು ಸದರಿಯವರ ಕಾರ್ಯನಿರ್ವಹಣಾ ವರದಿಯಲ್ಲಿ ಸೇವೆಯು ತೃಪ್ತಿಕರವಾಗಿರುವುದಾಗಿ ಹಾಗೂ ಸೇವೆಯನ್ನು ಮುಂದುವರೆಸಬಹುದು ಎಂದು ಶಿಫಾರಸ್ಸು ಮಾಡಿರುವುದನ್ನು ಪರಿಗಣಿಸಿದ ಸಭೆಯು ಸದರಿಯವರ ಸೇವೆಯನ್ನು ದಿನಾಂಕ:29.08.2023ರಿಂದ ಪೂರ್ವಾನ್ವಯವಾಗುವಂತೆ ಮುಂದಿನ ಹನ್ನೊಂದು ತಿಂಗಳ ಅವಧಿಗೆ ಷರತ್ತಿಗಳಿಗೊಳಪಟ್ಟು ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 11. | 2023–24.ಸಾ.ಸಿಂ–01 ಸಿ.ವಿ–03 | ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ತತ್ಸಮಾನ ವೃಂದ ಶೈಕ್ಷಣಿಕ ಸಿಬ್ಬಂದಿಗಳಿಗೆ ಯು.ಜಿ.ಸಿ–ಸಿಎಎಸ್ ಅಡಿಯಲ್ಲಿ Academic Level 12 to 13A & 13A to 14 ಗೆ ಪದೋನ್ನತಿ ನೀಡುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಸಹಾಯಕ ಪ್ರಾಧ್ಯಾಪಕರಿಂದ ಸಹ ಪ್ರಾಧ್ಯಾಪಕರಿಗೆ, ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರುಗಳಿಗೆ ಹಾಗೂ ತತ್ಸಮಾನ ವೃಂದ ಶೈಕ್ಷಣಿಕ ಸಿಬ್ಬಂದಿಗಳಿಗೆ (ಡಾ. ರವಿ ವೆಂಕಟ್.ಬಿ ಉಪಗ್ರಂಥಪಾಲಕರು ಹೊರತುಪಡಿಸಿ) ಯು.ಜಿ.ಸಿ–ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಐ.ಕ್ಯೂ.ಎ.ಸಿ ಪರಿಶೀಲನಾ ವರದಿಯ ಆಧಾರದ ಮೇಲೆ ಹಾಗೂ Selection committee ಯ ಶಿಫಾರಸ್ಸಿಗೆ ಅನುಗುಣವಾಗಿ ಆಯಾ ಬೋಧಕ ಸಿಬ್ಬಂದಿಗಳು ಹೊಂದುವ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ ಪದೋನ್ನತಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಮುಂದುವರೆದು, ಆರ್ಥಿಕ ಸೌಲಭ್ಯಗಳನ್ನು ಪದೋನ್ನತಿ ದಿನಾಂಕದಿಂದಲೇ ಕಾಲ್ಪನಿಕವಾಗಿ ನಿಗದಿಪಡಿಸಿ, ಸಿಂಡಿಕೇಟ್ ಸಭೆಯ ನಿರ್ಣಯದ ದಿನಾಂಕದಿಂದ ಅನ್ವಯವಾಗುವಂತೆ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಲು ಸಭೆಯು ತೀರ್ಮಾನಿಸಿತು. |

| | | | |
|---|---|---|---|
| 12. | 2023–24.ಸಾ.ಸಿಂ–01 ಸಿ.ವಿ–04 | ಸಹಾಯಕ ಪ್ರಾಧ್ಯಾಪಕರು ಹಾಗೂ ತತ್ಸಮಾನ ವೃಂದರ ಶೈಕ್ಷಣಿಕ ಸಿಬ್ಬಂದಿಗಳಿಗೆ ಯು.ಜಿ.ಸಿ-ಸಿಎಎಸ್ ಅಡಿಯಲ್ಲಿ Academic Level 11 to 12 ಕ್ಕೆ ಪದೋನ್ನತಿ ನೀಡುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಯು.ಜಿ.ಸಿ ಯ ಅಧಿಸೂಚನೆ ಸಂಖ್ಯೆ:No.F.No.9-1/2010(PS/ MISC) Pt.Vol.II, New Delhi dated 31st July 2023 (3rd Amendment) ರಲ್ಲಿನ ತಿದ್ದುಪಡಿಗಳನ್ನು ಅಳವಡಿಸಿಕೊಂಡು ನಿಯಮಾನುಸಾರ ಕ್ರಮ ಕೈಗೊಂಡು ಮುಂಬರುವ ಸಿಂಡಿಕೇಟ್ ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ಸಭೆಯು ತೀರ್ಮಾನಿಸಿತು. |
| 13. | 2023–24.ಸಾ.ಸಿಂ–01 ಸಿ.ವಿ–05 | ಅರೆಕಾಲಿಕ ನಿಧನರಾದ ಡಾ. ತಿಪ್ಪೇಸ್ವಾಮಿ ಟಿ.ಜಿ ಸಹಾಯಕ ಪ್ರಾಧ್ಯಾಪಕರು ಇವರ ಪತ್ನಿ ಶ್ರೀಮತಿ ಟಿ.ಜಿ ಅನಿತಾ ರವರ ಕಿರಿಯ ಮಗನಾದ ಪ್ರಜೀತ್ ಟಿ.ಜಿ ಇವರ ಅನುಕಂಪದ ಆಧಾರಿತ ನೇಮಕಾತಿ ಬಗ್ಗೆ ಅರ್ಜಿ ಸಲ್ಲಿಸಲು ಎರಡು ವರ್ಷ ಕಾಲಾವಕಾಶ ನೀಡುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಅರೆಕಾಲಿಕ ನಿಧನರಾದ ಡಾ. ತಿಪ್ಪೇಸ್ವಾಮಿ ಟಿ.ಜಿ ಸಹಾಯಕ ಪ್ರಾಧ್ಯಾಪಕರು ಇವರ ಪತ್ನಿ ಶ್ರೀಮತಿ ಟಿ.ಜಿ ಅನಿತಾ ರವರ ಕಿರಿಯ ಮಗನಾದ ಪ್ರಜೀತ್ ಟಿ.ಜಿ ಇವರು ಅನುಕಂಪದ ಆಧಾರಿತ ನೇಮಕಾತಿ ಕುರಿತು ಅರ್ಜಿ ಸಲ್ಲಿಸಲು ನಿಯಮಾನುಸಾರ ಕಾಲಾವಕಾಶ ಇರುವುದರಿಂದ ಸದರಿಯವರು ಕೋರಿರುವಂತೆ ಎರಡು ವರ್ಷಗಳ ಕಾಲಾವಕಾಶ ನೀಡಲು ಸಭೆಯು ತೀರ್ಮಾನಿಸಿತು. |
| **ಇಂಜಿನಿಯರಿಂಗ್ ವಿಭಾಗ** | | | |
| 14. | 2023–24.ಸಾ.ಸಿಂ–01 ಇಂ.ವಿ.03 | ತುಮಕೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸೇವೆಯನ್ನು ನೀಡುತ್ತಿರುವ ಮೆ. ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ. ಲಿ., ಬೆಂಗಳೂರು ರವರ ಸೇವೆಯ ಮುಂದುವರಿಕೆ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಮೆ. ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ. ಲಿ., ಇವರ ಸೇವೆಯು ವಿಶ್ವವಿದ್ಯಾನಿಲಯಕ್ಕೆ ತೃಪ್ತಿಕರವಾಗದಿರುವುದರಿಂದ ಇವರ ಸೇವೆಯನ್ನು ಜನವರಿ 2024ಕ್ಕೆ ಮುಕ್ತಾಯಗೊಳಿಸುವುದು. ಈ ಸಂಬಂಧ ಹೊಸ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. ಮುಂದುವರೆದು, ಮೆ. ಸಿ.ಐ.ಎಸ್. ಬ್ಯೂರೋಸ್ ಫೆಸಿಲಿಟಿ ಪ್ರೈ. ಲಿ., ಬೆಂಗಳೂರು ಇವರನ್ನು ಬ್ಲಾಕ್ ಲಿಸ್ಟ್‌ಗೆ ಸೇರಿಸುವುದು.<br>ಭದ್ರತಾ ಸಿಬ್ಬಂದಿಗಳಿಗೆ ಪಾವತಿಸಬೇಕಾದ ವ್ಯತ್ಯಾಸದ ಮೊತ್ತವನ್ನು ಹಾಗೂ Registration fee ಹೆಸರಿನಲ್ಲಿ ಹಾಗೂ ಸಮವಸ್ತ್ರದ ಸಂಬಂಧ ಪ್ರತಿಯೊಬ್ಬ ಸಿಬ್ಬಂದಿಗಳಿಂದ ಪಡೆದಿರುವ |

| | | | |
|---|---|---|---|
| | | | ರೂ.3,000.00 ಗಳನ್ನು ಸೆಪ್ಟೆಂಬರ್ 2023ರ ಮಾಹೆಯೊಳಗೆ ಸದರಿ ಸಿಬ್ಬಂದಿಗಳಿಗೆ ಹಿಂದಿರುಗಿಸಲು ಸದರಿ ಸಂಸ್ಥೆಯವರಿಗೆ ತಿಳಿಸಲು ಸಭೆಯು ತೀರ್ಮಾನಿಸಿತು. |
| 15. | 2023-24.ಸಾ.ಸಿಂ-01 ಇಂ.ವಿ.04 | ತುಮಕೂರು ರೈಲ್ವೆ ನಿಲ್ದಾಣ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡಕ್ಕೆ ಎರಡನೇ ಮಹಡಿಯನ್ನು ನಿರ್ಮಿಸುವ ಬಗ್ಗೆ. | ತುಮಕೂರು ರೈಲ್ವೆ ನಿಲ್ದಾಣ ರಸ್ತೆಯಲ್ಲಿ RUSA ಅನುದಾನದಿಂದ ನಿರ್ಮಾಣವಾಗುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಯರ ಹಾಸ್ಟೆಲ್ ಕಟ್ಟಡಕ್ಕೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದ ಅನುದಾನದಿಂದ ಎರಡನೇ ಮಹಡಿಯನ್ನು ನಿರ್ಮಿಸುವ ಸಂಬಂಧ ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ದರಗಳಂತೆ ರೂ.1.25 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿರುವುದನ್ನು ಪರಿಶೀಲಿಸಿದ ಸಭೆಯು ಈ ಕುರಿತು ಅಂದಾಜು ಪಟ್ಟಿಯನ್ನು ಅನುಮೋದಿಸಿ ಕಾಮಗಾರಿಯ ಕುರಿತು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 16. | 2023-24.ಸಾ.ಸಿಂ-01 ಇಂ.ವಿ.05 | ವಿಶ್ವವಿದ್ಯಾನಿಲಯದ ಆವರಣದಲ್ಲಿ ಜಿಮ್ನಾಷಿಯಂ ಹಾಲ್ ನಿರ್ಮಾಣ ಮಾಡುವ ಬಗ್ಗೆ. | ವಿಶ್ವವಿದ್ಯಾನಿಲಯದ ಆವರಣದಲ್ಲಿ ಜಿಮ್ನಾಷಿಯಂ ಹಾಲ್ ನಿರ್ಮಾಣ ಮಾಡುವ ಸಂಬಂಧ ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ದರಗಳಂತೆ ರೂ.60.00 ಲಕ್ಷ ಮೊತ್ತದ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿರುವುದನ್ನು ಪರಿಶೀಲಿಸಿದ ಸಭೆಯು ಈ ಕುರಿತು ಅಂದಾಜು ಪಟ್ಟಿಯನ್ನು ಅನುಮೋದಿಸಿ ಕಾಮಗಾರಿಯ ಕುರಿತು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| **ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ (ಸಿಬ್ಬಂದಿ ವಿಭಾಗ)** | | | |
| 17. | 2023-24.ಸಾ.ಸಿಂ-01 ಸಿ.ವಿ-06 | ಬೋಧಕೇತರ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ಪರಿನಿಯಮಗಳಲ್ಲಿನ ಅವಕಾಶದಂತೆ ನೇರ ನೇಮಕಾತಿಗೆ ರಿಕ್ತವಾದ ಪ್ರಥಮ ದರ್ಜೆ ಸಹಾಯಕರ ಖಾಲಿ ಹುದ್ದೆಗಳಿಗೆ ಪದೋನ್ನತಿ ನೀಡಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಸರ್ಕಾರದ ಆದೇಶ ಸಂಖ್ಯೆ ಇಡಿ 25 ಯುಟಿಟಿ 2021 ದಿನಾಂಕ 01.12.2022 ರನ್ವಯ ಹಿಂಬಡ್ತಿಗೆ ಕ್ರಮವಹಿಸಲು ಸಭೆಯು ತೀರ್ಮಾನಿಸಿತು. |
| 18. | 2023-24.ಸಾ.ಸಿಂ-01 ಸಿ.ವಿ-07 | ಪಿ.ಹೆಚ್.ಡಿ / ಎಂ.ಫಿಲ್ ಪಡೆದಿರುವ ಸಿಬ್ಬಂದಿಗಳ ಪದೋನ್ನತಿಯ ದಿನಾಂಕವನ್ನು ಪರಿಷ್ಕರಿಸುವ ಸಂಬಂಧ ವಿಶ್ವವಿದ್ಯಾನಿಲಯದ | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಸರ್ಕಾರದ ಆದೇಶ ಸಂಖ್ಯೆ ಇಡಿ 08 ಯುಆರ್ಇ 2023 ದಿನಾಂಕ |

| | | | |
|---|---|---|---|
| | | ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಮನವಿಗಳ ಕುರಿತು. | 18.05.2023ರನ್ವಯ ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಮನವಿಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ ಎಂದು ಸಭೆಯು ತೀರ್ಮಾನಿಸಿತು. |
| 19. | 2023-24.ಸಾ.ಸಿಂ-01 ಸಿ.ವಿ-08 | ಶ್ರೀ ಬಸವರಾಜ್ ಪಿ.ಎಸ್. ಇವರು ವಿಶ್ವವಿದ್ಯಾನಿಲಯದ ವಿರುದ್ಧ ಹೂಡಿರುವ ರಿಟ್ ಅರ್ಜಿ ಸಂಖ್ಯೆ: 11519/2019ಕ್ಕೆ ಸಂಬಂಧಿಸಿದಂತೆ, ಮಾನ್ಯ ಘನ ಉಚ್ಛನ್ಯಾಯಾಲವು ಶ್ರೀ ಬಸವರಾಜ್ ಪಿ.ಎಸ್. ಇವರ ದಿನಾಂಕ 22.02.2023ರ ಮನವಿಯನ್ನು ಕಾನೂನು ಪ್ರಕಾರ ಕ್ರಮವಹಿಸುವಂತೆ ಅಂತಿಮ ತೀರ್ಪು ನೀಡಿರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ಶ್ರೀ ಕೆ ಬಸಪ್ಪಗೌಡ ವಕೀಲರು, ಹಾಗೂ ಕಾನೂನು ಸಲಹೆಗಾರರು, ಶಿವಮೊಗ್ಗ ಇವರು ಅಭಿಪ್ರಾಯ ನೀಡಿರುವಂತೆ Statues relating to the Tumkur University Service and Kannada Language examinations for Ministerial staff-2014ರ ದಿನಾಂಕ 25.04.2015 ರಲ್ಲಿರುವಂತೆ ಹುದ್ದೆಗಳು ಲಭ್ಯವಿದ್ದಲ್ಲಿ ಸದರಿ ಪರಿನಿಯಮಾವಳಿ ಅಧಿಸೂಚನೆಗೊಂಡ ದಿನಾಂಕದಿಂದ ಅನ್ವಯವಾಗುವಂತೆ ದಿನಾಂಕ 25.04.2015 ರಲ್ಲಿ ಖಾಲಿಯಿರುವ ಪ್ರಥಮ ದರ್ಜೆ ಸಹಾಯಕರು ಅಥವಾ ತತ್ಸಮಾನ ಹುದ್ದೆಯ ಎದುರಾಗಿ ಪದೋನ್ನತಿಯನ್ನು ನೀಡಲು ಮುಂದಿನ ಕ್ರಮ ಕೈಗೊಳ್ಳಲು ಸಭೆಯು ನಿರ್ಣಯಿಸಿತು. |
| 20. | 2023-24.ಸಾ.ಸಿಂ-01 ಸಿ.ವಿ-09 | ತುಮಕೂರು ವಿಶ್ವವಿದ್ಯಾನಿಲಯದ Statute relating to Conduct of Interview for Appointment and Promotion of Teachers and other Academic Staff in the University and Constitute College ಗೆ ತಿದ್ದುಪಡಿ ತರುವ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು ಯು.ಜಿ.ಸಿ.ಯ ದಿನಾಂಕ 31.07.2023ರ ಪ್ರಕಟಣೆಯಲ್ಲಿರುವಂತೆ ತುಮಕೂರು ವಿಶ್ವವಿದ್ಯಾನಿಲಯದ Statute relating to Conduct of Interview for Appointment and Promotion of Teachers and other Academic Staff in the University and Constitute College ಗೆ ಮಾಡಿರುವ ತಿದ್ದುಪಡಿ ಯನ್ನು (Amendement) ಅಳವಡಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | **ಸಾಮಾನ್ಯ ವಿಭಾಗ ಮತ್ತು ಖರೀದಿ ಕೋಶ** | |
| 21. | 2023-24.ಸಾ.ಸಿಂ-01 ಸಾ&ಖ ವಿಭಾಗ-01 | ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಬಿ.ಸಿ.ಎ. ಎಂ.ಸಿ.ಎ. ವಿಭಾಗ, ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಿಗೆ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಸರಬರಾಜು ಪಡೆಯುವ | ವಿಶ್ವವಿದ್ಯಾನಿಲಯದ ವಿಜ್ಞಾನ ಕಾಲೇಜಿನ ಬಿ.ಸಿ.ಎ. ಎಂ.ಸಿ.ಎ. ವಿಭಾಗ, ಆಡಳಿತ ಕಛೇರಿ ಹಾಗೂ ವಿವಿಧ ವಿಭಾಗಗಳಿಗೆ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು |

| | | | |
|---|---|---|---|
| | | ಸಂಬಂಧ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆಯನ್ನು ಹಾಗೂ ಹಣ ಮಂಜೂರಾತಿಗಾಗಿ ಸಿಂಡಿಕೇಟ್ ಸಭೆಯ ಅನುಮೋದನೆ ಕೋರಿ. | ಸರಬರಾಜು ಪಡೆಯುವ ಸಂಬಂಧ ಟೆಂಡರ್ ಆಹ್ವಾನಿಸಿರುವ ಪ್ರಕ್ರಿಯೆಗೆ ಅನುಮೋದನೆ ಹಾಗೂ ಸ್ವೀಕೃತವಾಗುವ ಟೆಂಡರ್‌ಗಳ ಕುರಿತು ಪ್ರಕ್ರಿಯೆಯನ್ನು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| **ಶೈಕ್ಷಣಿಕ ವಿಭಾಗ** | | | |
| 22. | 2023–24.ಸಾ.ಸಿಂ–01 ಶೈ.ವಿ–01 | 2023–24ನೇ ಶೈಕ್ಷಣಿಕ ಸಾಲಿನಲ್ಲಿ Self finance ಅಡಿಯಲ್ಲಿ ನೂತನವಾಗಿ ಪ್ರಾರಂಭಿಸಿರುವ Bachelor of Design ಕೋರ್ಸನ್ನು ನಡೆಸುವ ಬಗ್ಗೆ. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಥಳಾವಕಾಶದ ಕೊರತೆ ಇರುವುದರಿಂದ ತುಮಕೂರು ನಗರದಲ್ಲಿ ಸೂಕ್ತ ಸ್ಥಳವಕಾಶ ಗುರುತಿಸಿ ಮಾಹೆಯಾನ ಬಾಡಿಗೆ ಆಧಾರದ ಮೇಲೆ ಕಟ್ಟಡವನ್ನು ಬಾಡಿಗೆ ಪಡೆದು 2023–24ನೇ ಶೈಕ್ಷಣಿಕ ಸಾಲಿನಿಂದಲೇ Bachelor of Design ಕೋರ್ಸ್‌ನ್ನು Self finance ಅಡಿಯಲ್ಲಿ ಪ್ರಾರಂಭಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |

**<u>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು</u>**

ಡಾ. ಪಾಲಾಕ್ಷ ಮೂರ್ತಿ ಬಿ.ಎಸ್, ಸಹಾಯಕ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಕರ್ತವ್ಯದಲ್ಲಿನ ನಿರ್ಲಕ್ಷ್ಯತೆ ಹಾಗೂ ಸದರಿಯವರ ಕರ್ತವ್ಯ ನಿರ್ವಹಣೆಯ ಬಗ್ಗೆ ಚರ್ಚಿಸಿದ ಸಭೆಯು ಇವರನ್ನು ಸೇವೆಯಿಂದ ಅಮಾನತು ಮಾಡಲು ಹಾಗೂ ಇವರ ಕರ್ತವ್ಯ ಲೋಪದ ಕುರಿತು ವಿಚಾರಣೆ ಮಾಡಲು ಏಕ ಸದಸ್ಯ ಸಮಿತಿಯನ್ನು ರಚಿಸಿ ಸಮಿತಿ ಸಲ್ಲಿಸುವ ವಿಚಾರಣಾ ವರದಿಯ ಆಧಾರದ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿ ಮುಂದಿನ ಕ್ರಮ ಕೈಗೊಳ್ಳಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

| | | | |
|---|---|---|---|
| **ಕುಲಸಚಿವರು (ಪರೀಕ್ಷಾಂಗ)** | | **ಡಾ. ಹೆಚ್.ಪಿ. ವೀರಭದ್ರಸ್ವಾಮಿ** | [signature] |
| **ಡಾ. ಕೆ ರಾಜೀವಲೋಚನ** | | **ಪ್ರೊ. ಹೆಚ್.ಕೆ. ಶಿವಲಿಂಗಸ್ವಾಮಿ** | [signature] |
| **ಶ್ರೀ ಕೆ.ಆರ್ ದೇವರಾಜ್** | | **ಡಾ. ಪ್ರಸನ್ನ** | [signature] |
| **ಡಾ. ರಂಗಪ್ಪ ಎಸ್.ಟಿ.** | [signature] | **ಶ್ರೀಮತಿ ವಸಂತ ಟಿ.ಡಿ.** | [signature] |

[signature]
**ಮಾನ್ಯ ಕುಲಸಚಿವರು**

[signature]
**ಮಾನ್ಯ ಕುಲಪತಿಗಳು**

[signature]